ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

ಸ್ಪೆಷಲ್ ಕೇಸ್ ನಂಃ 117/2019 ಪಿ.ಡಬ್ಲ್ಯುಃ 5

ಸಿ.ಡಬ್ಲ್ಯುಃ 1

| | |
|---|---|
| ಸಾಕ್ಷಿದಾರರ ಹೆಸರು | ಸೀತಾರಾಮ ಪಿ . |
| ತಂದೆಯ ಹೆಸರು | ಪಂಜು ಪೂಜಾರಿ |
| ವಯಸ್ಸು | 45 ವರ್ಷ |
| ಉದ್ಯೋಗ | ಪೊಲೀಸ್ ನಿರೀಕ್ಷಕರು , ಶಿರಸಿ ಗ್ರಾಮೀಣ ಪೊಲೀಸ್ ಠಾಣೆ |
| ವಿಳಾಸ | ಶಿರಸಿ |

ದಿನಾಂಕಃ 02-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 10-01-2018 ರಿಂದ 20-06-2020 ರವರೆಗೆ ಉಡುಪಿಯ CEN ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ. ನನ್ನ ಕಾರ್ಯ ವ್ಯಾಪ್ತಿಯಲ್ಲಿ ಇಡೀ ಉಡುಪಿ ಜಿಲ್ಲೆ ಬರುತ್ತಿತ್ತು.

2)ದಿಃ 23-05-2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 3-30 ಗಂಟೆಗೆ ಉಡುಪಿ ಜಿಲ್ಲೆಯ, ಹೆರ್ಗ ಗ್ರಾಮದ, ಈಶ್ವರ ನಗರದ 2 ನೇ ಕ್ರಾಸ್ ನಲ್ಲಿ ರೀಗಲ್ ಹಿಲ್ಸ್ ಅಪಾರ್ಟಮೆಂಟ್ ಹತ್ತಿರ ಆರೋಪಿ ಗಾಂಜಾ ಮಾರಾಟ ಮಾಡುವ ಬಗ್ಗೆ ಮಾಹಿತಿ ಬಂದಿತ್ತು. ಅದಕ್ಕಾಗಿ ದಾಖಲಿಸಿಕೊಂಡು ಅಧೀಕ್ಷಕರ ಗಮನಕ್ಕೆ ಜ್ಞಾಪನವನ್ನು ಸಲ್ಲಿಸಿ, ದಾಳಿ ಮಾಡಲು ಅನುಮತಿ ಕೋರಿದ್ದೆ. ಅವರಿಂದ ಪಡೆದ ಅನುಮತಿಯನ್ನು ಈಗ ನೋಡಿ ನಿಪಿ-13 ಎಂದು ಗುರುತಿಸಿದ್ದೇನೆ.

3) ಅದರಂತೆ ದಾಳಿ ಮಾಡಲು ಬೇಕಾದ ಪತ್ರಾಂಕಿತ ಅಧಿಕಾರಿಯನ್ನು ಒದಗಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗೆ ಕೋರಿದೆ. ಸದರಿ ಕೋರಿಕೆಯನ್ನು ಈಗ ನೋಡಿ ನಿಪಿ-14, ಅದರಲ್ಲಿರುವ ನನ್ನ ಸಹಿ ನಿಪಿ-14(ಎ) ಎಂದು ಗುರುತಿಸಿದ್ದೇನೆ. ಸದರಿ ಕೋರಿಕೆಯಂತೆ ಬಂದಿದ್ದ ಚಾಸಾ -2 ಇವರಿಗೆ ಮಧ್ಯಾಹ್ನದ 3-45 ರ ಸಮಯದಲ್ಲಿ ದಾಳಿಯ ಬಗ್ಗೆ ಮಾಹಿತಿ ಕೊಟ್ಟು ಸಹಕರಿಸಲು ಕೋರಿದ್ದೆ. ಆ ಸಮಯದಲ್ಲಿ ಠಾಣೆಗೆ ಕರೆಸಿದ್ದ

ಚಾಸಾ -3 ಮತ್ತು 4 ಇವರಿಗೂ ಸಹ ಆ ವಿಷಯವನ್ನು ಹಂಚಿಕೊಂಡು, ನೋಟಿಸನ್ನು ಕೊಟ್ಟಿದ್ದು ಅದು ಈಗಾಗಲೇ ನಿಶಾನೆ ಪಿ-3 ಆಗಿದೆ. ಅದರಲ್ಲಿರುವ ನನ್ನ ಸಹಿ ನಿಪಿ-3(ಎ) ಎಂದು ಗುರುತಿಸಿದ್ದೇನೆ.

4) ಅದಕ್ಕಾಗಿ ಚಾಸಾ -5 ರಿಂದ 9 ಇತರೇ ಸದಸ್ಯರು ಇವರನ್ನು ತಮ್ಮೊಂದಿಗೆ ಬರಲು ಸೂಚಿಸಿದ್ದೆ. ನಾನು, ಚಾಸಾ -2, 3 ಮತ್ತು 4 ಇಲಾಖಾ ವಾಹನದಲ್ಲಿ ಮತ್ತು ಉಳಿದ ಸಿಬ್ಬಂದಿಗಳು ಖಾಸಗಿ ವಾಹನದಲ್ಲಿ ಠಾಣೆಯಿಂದ ಹೊರಟೆವು. ಆಗ ನಮ್ಮೊಂದಿಗೆ ಬೇಕಾದ ತೂಕದ ಸಾಧನ, ಹೊಲಿಯುವ ಬಟ್ಟೆ , ಸೂಜಿ, ದಾರ, ಅರಗು, ಮುದ್ರೆಗಳೊಂದಿಗೆ 4 ಗಂಟೆಗೆ ಠಾಣೆಯಿಂದ ಹೊರಟೆವು. ಮಧ್ಯಾಹ್ನ 4-20 ರ ಸಮಯದಲ್ಲಿ ಹೆರ್ಗ ಗ್ರಾಮದ, ಈಶ್ವರ ನಗರದ, 2 ನೇ ಕ್ರಾಸ್ ನ, ರೀಗಲ್ ಹಿಲ್ಸ್ ಅಪಾರ್ಟಮೆಂಟ್ ನ ಬಳಿ ಸಾರ್ವಜನಿಕ ರಸ್ತೆಗೆ ತಲುಪಿದಾಗ ಅಲ್ಲಿ ನಿಂತಿದ್ದ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಅಲ್ಲಿಂದ ಓಡಿ ಹೋಗಿದ್ದ. ತಕ್ಷಣ ಆತನನ್ನು ಹಿಂಬಾಲಿಸಿ, ಹಿಡಿದು ವಾಹನದ ಬಳಿ ಕರೆತಂದು ವಿಚಾರಿಸಿದ್ದೆವು. ಆತನ ಹೆಸರು, ವಿಳಾಸ ಕೇಳಿದ್ದೆವು. ಆತ ಎಂಐಟಿಯ ಹಳೆಯ ವಿದ್ಯಾರ್ಥಿಯಾಗಿದ್ದು, ಆತ ಟ್ರಾನ್ಸಪರ್ ಸರ್ಟಿಪಿಕೇಟ್ ತೆಗೆದುಕೊಂಡು ಹೋಗಲು ಬಂದಿದ್ದಾಗಿ ಹೇಳಿದ್ದ. ಆತನ ಬಳಿಯಲ್ಲಿ ಇದ್ದ ನೀಲಿ ಬಣ್ಣದ ಶೋಲ್ಡರ್ ಬ್ಯಾಗ್ ನ ಬಗ್ಗೆ ಕೇಳಲಾಗಿ, ಆತನ ಬಳಿ ಗಾಂಜಾ ಇದ್ದು, ಅದನ್ನು ಮಾರಲು ತಂದಿರುವುದಾಗಿ ಹೇಳಿದ್ದ. ಅದನ್ನು ತಪಾಸು ಮಾಡುವ ಅವಶ್ಯಕತೆ ಇದ್ದುದರಿಂದ ಆತನಿಗೆ ಮಾಹಿತಿಯನ್ನು ಕೊಟ್ಟು, ತಪಾಸಣೆ ತಕರಾರು ಕೇಳಿದ್ದು, ಆಗ ನಮ್ಮೊಂದಿಗೆ ಇದ್ದ ಚಾಸಾ -2 ಇವರ ಬಗ್ಗೆ ಆರೋಪಿತನಿಗೆ ಮಾಹಿತಿ ಕೊಟ್ಟಿದ್ದೆವು. . ಆಗ ಚಾಸಾ -2 ಇವರು ಆರೋಪಿತನೊಂದಿಗೆ ಮಾತನಾಡಿದ್ದರು. ಅವರಿಂದ ತಪಾಸಣೆಗಾಗಿ ಅಲ್ಲಿಯೇ ಆಗ ನಾನು ಆರೋಪಿಗೆ ನೋಟಿಸನ್ನು ಕೊಟ್ಟಿದ್ದೆ.ಅದನ್ನು ಈಗ ನೋಡಿ ನಿಪಿ-15, ಅದರಲ್ಲಿರುವ ನನ್ನ ಸಹಿ ನಿಪಿ-15(ಎ) ಎಂದು ಗುರುತಿಸಿದ್ದೇನೆ. ಆರೋಪಿ ಸದರಿ ತಪಾಸಣೆಗೆ ಆಕ್ಷೇಪ ಇಲ್ಲ ಎಂದು ಹಿಂಬರಹ ಬರೆದು ಸಹಿ ಮಾಡಿದ್ದ. ನಿಪಿ-15 ರ ಆ ಭಾಗವನ್ನು ನಿಶಾನೆ ಪಿ-15(ಬಿ) ಎಂದುಗುರುತಿಸಿದೆ.

5) ನಿಪಿ-15 ರಂತೆ ಮುಂದುವರರಿಯಲು ನಾನು, ಚಾಸಾ -2 ಮತ್ತು ನಮ್ಮ ಸಿಬ್ಬಂದಿಗಳು ನಮ್ಮನ್ನು ತಪಾಸಣೆ ಮಾಡಿಕೊಂಡು ನಮ್ಮ ಬಳಿ ಯಾವುದೇ ಮಾದಕ ವಸ್ತುಗಳು ಇಲ್ಲ ಎಂದು ಖಚಿತಪಡಿಸಿಕೊಂಡೆವು. ಚಾಸಾ -2 ಆರೋಪಿತನ ಬಳಿಯಲ್ಲಿ ಇದ್ದ ಶೋಲ್ಡರ್ ಬ್ಯಾಗ್ ನ್ನು ತೆಗೆದು ನೋಡಿದಾಗ ಸಾದಾ ಪ್ಲಾಸ್ಟಿಕ್ ತೊಟ್ಟೆ ಇತ್ತು. ಅದನ್ನು ತೆರೆದು

ನೋಡಿದಾಗ ಅದರಲ್ಲಿ ಎಲೆ, ಮೊಗ್ಗು, ದಂಟು, ಬೀಜಗಳೊಂದಿಗೆ ಗಾಂಜಾ ಇರುವುದು ಕಂಡುಬಂದಿರುತ್ತದೆ. ಅದನ್ನು ಪ್ಲಾಸ್ಟಿಕ್ ತೊಟ್ಟೆ ಸಮೇತ ತೂಕ ಮಾಡಿದಾಗ ಅದರ ತೂಕ 2 ಕೆಜಿ 142 ಗ್ರಾಂ ತೂಕ ಇದ್ದದ್ದು ಕಂಡು ಬಂದಿತು. ಸದರಿ ಗಾಂಜಾವನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಡಿಸಿಬಿ ಎನ್ನುವ ಅರಗು ಸೀಲು ಹಾಕಿ, "ಎ "ಎಂದು ಗುರುತಿಸಿ, ನಮ್ಮ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತದೆ.

6) ನಂತರ ಚಾಸಾ -2 ಆರೋಪಿಯ ಅಂಗ ಶೋಧನೆ ಮಾಡಿದಾಗ ಆತನ ಶರ್ಟ್ ನಲ್ಲಿ ವೀವೋ ಕಂಪೆನಿಯ ಮೊಬೈಲ್ ಸಿಕ್ಕಿರುತ್ತದೆ. ಆ ಮೊಬೈಲ್ ನಲ್ಲಿ ಎರಡು ಸಿಮ್ ಗಳು ಇದ್ದವು. ಸದರಿ ಮೊಬೈಲ್ ನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಡಿಸಿಬಿ ಎನ್ನುವ ಅರಗು ಸೀಲು ಹಾಕಿ, "ಬಿ "ಎಂದು ಗುರುತಿಸಿ, ನಮ್ಮ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತದೆ. ಗಾಂಜಾ ಇದ್ದ ಶೋಲ್ಡರ್ ಬ್ಯಾಗ್ ಅನ್ನು ಸಹ ವಶಪಡಿಸಿಕೊಂಡಿದ್ದೆನು.

7) ಗಾಂಜಾ ಇದ್ದ ಶೋಲ್ಡರ್ ಬ್ಯಾಗ್ ಅನ್ನು ಸಹ ಅದೇ ಪಂಚನಾಮೆ ಅಡಿಯಲ್ಲಿ ವಶಪಡಿಸಿಕೊಂಡಿದ್ದೆವು. ಸದರಿ ಬ್ಯಾಗ್ ಮತ್ತು ಮೊಬೈಲ್ ಅನ್ನು ಈಗಾಗಲೇ ಎಂಒ-2 ಮತ್ತು 3 ಎಂದು ಗುರುತಿಸಲಾಗಿದೆ. ಈ ಬಗ್ಗೆ ಸ್ಥಳದಲ್ಲಿ ಸಂಜೆ 4-30 ರಿಂದ 6 ಗಂಟೆಯವರಗೆ ಬರೆದ ಪಂಚನಾಮೆಗೆ ನಾನು ಮತ್ತು ಪಂಚರು, ಚಾಸಾ -2 ಮತ್ತು ನಮ್ಮ ಸಿಬ್ಬಂದಿಗಳು ಸಹಿ ಮಾಡಿರುತ್ತೇವೆ. ಈಗ ನೋಡಿದ ಪಂಚನಾಮೆ ಅದೇ ಇದ್ದು ಅದನ್ನು ಈಗಾಗಲೇ ನಿಪಿ-4, ನಿಪಿ -4, ಅದರ ಮೇಲಿರುವ ನನ್ನ ಸಹಿ ನಿಪಿ -4(ಡಿ) ಎಂದು ಗುರುತಿಸಿದೆ. ಆ ಸಮಯದಲ್ಲಿ ತೆಗೆದಿದ್ದ ಫೋಟೋಗಳನ್ನು ನೋಡಿ ಅದನ್ನು ಈಗಾಗಲೇ ನಿಪಿ-7 ರಿಂದ 10 ಎಂದು ಗುರುತಿಸಿದೆ. ನನಗೆ ಈಗ ತೋರಿಸಿದ ನಿಪಿ-7, 8, 10 ರಲ್ಲಿ ನಾನು, ಚಾಸಾ -2 ರಿಂದ 9 ಮತ್ತು ಆರೋಪಿತನು ಇದ್ದೇವೆ. ನಿಪಿ-9 ರಲ್ಲಿ ಆದಿನ ಜಪ್ತಾದ ಗಾಂಜಾ ಇದೆ.

8) ಆದಿನ ಜಪ್ತಾದ ಮುದ್ದೆಮಾಲುಗಳಿಗೆ ಬಳಸಿದ ಮುದ್ರೆಯ ಮಾದರಿಯನ್ನು ತೆಗೆದು, ಆ ಪ್ರತಿಗಳನ್ನು ಪಂಚರಿಗೆ ನೀಡಿ ಅದಕ್ಕಾಗಿ ರಶೀತಿ ಪಡೆದಿದ್ದೇನೆ. ಸದರಿ ರಶೀತಿ ನಿಪಿ-5 ಆಗಿದೆ. ಅದರಲ್ಲಿರುವ ಮಾದರಿ ಮುದ್ರೆ ನಿಪಿ-5(ಎ) ಆಗಿದೆ.

9) ಆದಿನ ಆರೋಪಿತನ ಬಳಿಯಲ್ಲಿಇದ್ದ ಗಾಂಜಾಕ್ಕೆ ಆತನ ಬಳಿ ಯಾವುದೇ ಪರವಾನಿಗೆ ಇರಲಿಲ್ಲ. ಅದಕ್ಕಾಗಿ ಅಲ್ಲಿಯೆ ಆತನ ದಸ್ತಗಿರಿ ಕ್ರಮ ಜರುಗಿಸಿ, ಆತನೊಂದಿಗೆ ಜಪ್ತಾದ ಮುದ್ದೆಮಾಲುಗಳೊಂದಿಗೆ ಠಾಣೆಗೆ ಮರಳಿದ್ದೆ. ಅಲ್ಲಿಯವರೆಗೆ ಆಗಿದ್ದ ತನಿಖೆಗಾಗಿ

ಠಾಣೆಗೆ ಬಂದು ದೂರರೊಂದನ್ನು ನಿವೇದನೆಯಾಗಿ ಸಲ್ಲಿಸಿಕೊಂಡು ಅದಕ್ಕಾಗಿ ಠಾಣಾ ಗುನ್ನಾ ಸಂಖ್ಯೆ 57/2018 ಕ್ಕೆ ದಾಖಲಿಸಿಕೊಂಡಿದ್ದೆ. ಆದಿನ ನಾನು ಸಲ್ಲಿಸಿದ ನಿವೇದನೆಯನ್ನು ಈಗ ನೋಡಿ ನಿಪಿ-16 ಮತ್ತು ಆದಿನ ದಾಖಲಿಸಿದ ವರ್ತಮಾನವನ್ನು ಈಗ ನೋಡಿ ಅದನ್ನು ನಿಶಾನೆ ಪಿ-17 ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ನಿಪಿ-16(ಎ) ಮತ್ತು ನಿಪಿ-17(ಎ) ಎಂದು ಗುರುತಿಸಿದ್ದೇನೆ. ಜಪ್ತಾದ ಮುದ್ದೆಮಾಲುಗಳಿಗಾಗಿ ಅದೇ ದಿನ ಮು.ವರದಿಯನ್ನು ಸಲ್ಲಿಸಿದ್ದೆ.

10) ನಂತರ ಆರೋಪಿಯ ಹೇಳಿಕೆಯನ್ನು ಪಡೆದಿದ್ದೇನೆ. ಆರೋಪಿತನ ವೈದ್ಯಕೀಯ ತಪಾಸಣೆ ಮಾಡಿಸಿ, ನ್ಯಾಯಾಂಗ ಬಂಧನಕ್ಕೆ ಕೋರಿದ್ದೆ. ಅದೇ ದಿನ ಚಾಸಾ -2 ರಿಂದ 9 ಇವರ ಹೇಳಿಕೆಯನ್ನು ಪಡೆದಿದ್ದೆ. ಚಾಸಾ -3 ಮತ್ತು 4 ಇವರು ನನ್ನ ಮುಂದೆ ನಿಪಿ-11 ಮತ್ತು 12 ರಂತೆ ಹೇಳಿಕೆ ಕೊಟ್ಟಿದ್ದರು. ಅದೇ ದಿನ ನನ್ನ ಸಿಬ್ಬಂದಿ ನವೀನ್ ತೆಗೆದಿದ್ದ ನಿಪಿ-7 ರಿಂದ 10 ಪೋಟೋಗಳಿಗಾಗಿ ಪ್ರಮಾಣ ಪತ್ರವನ್ನು ಸಹ ಸಲ್ಲಿಸಿದ್ದರು. ಆದಿನ ಪೋಟೋ ತೆಗೆಯಲು ಬಳಸಿದ ಇಲಾಖಾ ಕ್ಯಾಮರಾ ನಮ್ಮ ಬಳಿಯಲ್ಲಿ ಈಗಲೂ ಇದೆ. ಸದರಿ ಪ್ರಮಾಣ ಪತ್ರವನ್ನು ಈಗ ನೋಡಿ ನಿಶಾನೆ ಪಿ-18 ಎಂದು ಗುರುತಿಸಿದ್ದೇನೆ. ನಿಶಾನೆ ಪಿ-4 ರ ದಾಳಿ ಮತ್ತು ಜಪ್ತಿಗೆ ಸಂಬಂಧಪಟ್ಟಂತೆ ವಿಶೇಷ ವರದಿಯನ್ನು ಅಧೀಕ್ಷಕರಿಗೆ ಸಲ್ಲಿಸಿದ್ದೆ. ಸದರಿ ವರದಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-19 ಎಂದು ಗುರುತಿಸಿದ್ದೇನೆ.

11) ದಿಃ 26-05-2018 ರಂದು ಜಪ್ತಾದ ಮಾದಕ ವಸ್ತುವಿನ ತಪಾಸಣೆಗಾಗಿ ಮಾದರಿಯನ್ನು ತೆಗೆಯಲು ಪರವಾನಿಗೆ ಕೋರಿದ್ದೆ. ಅದಕ್ಕಾಗಿ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್ ಸಿ. ಉಡುಪಿ ಇವರಿಗೆ ಮನವಿ ಸಲ್ಲಿಸಿದ್ದೆ. ಆ ಕೋರಿಕೆಯನ್ನು ಈಗ ನೋಡಿ ನಿಶಾನೆ ಪಿ-20 ಎಂದು ಗುರುತಿಸಿದ್ದೇನೆ.

12) ದಿಃ 31-05-2018 ರಂದು ಜಪ್ತಾದ ಮುದ್ದೆಮಾಲುಗಳು, ಪಂಚನಾಮೆಯ ನಕಲು, ಅನೆಕ್ಸರ್ -1 ಮತ್ತು 2 ನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದೆನು. ಸದರಿ ಅನೆಕ್ಸರ್ -1 ಮತ್ತು 2 ಇವುಗಳನ್ನು ಈಗ ನೋಡಿ ನಿಶಾನೆ ಪಿ-21 ಮತ್ತು 22 ಎಂದು ಗುರುತಿಸಿದ್ದೇನೆ. ಆದಿನ ತಪಾಸು ಮಾಡಿ ಜಪ್ತಾದ 2 ಕೆಜಿ 142 ಗ್ರಾಮ್ ನ ಪೈಕಿ 74 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದು, ಪ್ರತ್ಯೇಕವಾಗಿ ಪ್ಯಾಕ್ ಮಾಡಿ , ಸೀಲು ಮಾಡಿ, ಅರಗು ಸೀಲು ಹಾಕಿ, ನಮಗೆ ನೀಡಿರುತ್ತಾರೆ. ಉಳಿದ 2 ಕೆಜಿ 68 ಗ್ರಾಂ ನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲು ಮಾಡಿ, ಅರಗು ಸೀಲು ಮಾಡಿ ವಿಲೇವಾರಿಗೆ ಕಳುಹಿಸಲು ನೀಡಿರುತ್ತಾರೆ.

ಆ ಸಮಯದಲ್ಲಿಯೂ ಸಹ ಬಳಸಿದ ಮುದ್ರೆಯ ಮಾದರಿಯನ್ನು ಸಹ ಪ್ರತ್ಯೇಕವಾಗಿ ತೆಗೆಯಲಾಗಿತ್ತು. ಆದಿನ ತೆಗೆದ ಮಾದರಿಗೆ ಹಾಕಿದ ಅರಗು ಸೀಲ್ ನ್ನು ಈಗ ನೋಡಿ ಅದನ್ನು ನಿಶಾನೆ ಪಿ- 23 ಎಂದು ಗುರುತಿಸಿದ್ದೇನೆ. ಆದಿನ ಮರಳಿ ಪಡೆದ ಮಾದರಿ ಮತ್ತು ವಿಲೇಗಾಗಿ ಪ್ರತ್ಯೇಕಿಸಿದ ಮಾದಕ ವಸ್ತುವಿನ ವಿವರಗಳನ್ನು ಮತ್ತು ಅವುಗಳ ದೃಢೀಕರಣವನ್ನು ಈಗ ನೋಡಿ ನಿಪಿ-24 ಮತ್ತು 25 ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ತೆಗೆದಿದ್ದ 4 ಪೋಟೋಗಳನ್ನು ಈಗ ನೋಡಿ ಒಟ್ಟಾಗಿ ನಿಪಿ-26 ಎಂದು ಗುರುತಿಸಿದ್ದೇನೆ. ನಿಶಾನೆ ಪಿ-5 ರ ಸಮಯದಲ್ಲಿ ಬಳಸಿದ್ದ ಮುದ್ರೆಯ ಮಾದರಿಯನ್ನು ಈಗ ನೋಡಿ ನಿಶಾನೆ ಪಿ-27 ಎಂದು ಗುರುತಿಸಿದ್ದೇನೆ.

13) ದಿಃ 01-06-2018 ರಂದು ಜಪ್ತಾದ ಮಾದರಿಯನ್ನು ಸಿಬ್ಬಂದಿ ಮೂಲಕ ರಾಸಾಯನಿಕ ಪರೀಕ್ಷೆ ಮತ್ತು ವರದಿಗೆಂದು ಬೆಂಗಳೂರಿನ ಎಫ್ ಎಸ್ ಎಲ್ ಗೆ ಮನವಿಯೊಡನೆ ಕಳುಹಿಸಿಕೊಟ್ಟಿದ್ದೆ. ವಿಲೇಗಾಗಿ ಇದ್ದ ಮುದ್ದೆಮಾಲಿನ ಸ್ವಾಧೀನವನ್ನು ಅಧೀಕ್ಷಕರಿಗೆ ವಹಿಸಿದ್ದೆ. ಅದಕ್ಕಾಗಿ ಪಡೆದ ಸ್ವೀಕೃತಿಯನ್ನು ಈಗ ನೋಡಿ ನಿಶಾನೆ ಪಿ-28 ಎಂದು ಗುರುತಿಸಿದ್ದೇನೆ.

14) ದಿಃ 26-10-2018 ರಂದು ಜಪ್ತಾದ ಮುದ್ದೆಮಾಲನ್ನು ನಾಶ ಪಡಿಸಿದ್ದರೆಂದು ನನಗೆ ಮಾಹಿತಿ ಬಂದಿತ್ತು.

15) ದಿಃ 03-07-2019 ರಂದು ಎಫ್ ಎಸ್ ಎಲ್ ವರದಿ ನಿಪಿ-1 ನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ ದಿಃ 05-07-2019 ರಂದು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ. ಆದಿನ ಜಪ್ತಾದ ಮಾದಕ ವಸ್ತುವಿನ ಮಾದರಿ ಈಗಾಗಲೇ ಎಂಓ-1 ಆಗಿದೆ. ಆದಿನ ನಾನು ಹಿಡಿದಿದ್ದ ಆರೋಪಿ ನೋಡಿದರೆ ಗುರುತಿಸಬಲ್ಲೆ. ಈದಿನ ಆರೋಪಿ ಗೈರುಹಾಜರಾಗಿದ್ದು ಆತನನ್ನು ಗುರುತಿಸಲು ಯಾವುದೇ ತಕಾರಾರು ಇಲ್ಲ ಎಂದು ಆರೋಪಿ ಪರ ವಕೀಲರ ತಿಳಿಸಿರುತ್ತಾರೆ.

<u>ಪಾಟಿಸವಾಲುಃ ಆರೋಪಿ ಪರ ಶ್ರೀ ಟಿ.ವಿ.ಕೆ.ಎಸ್ ವಕೀಲರಿಂದ</u>

1) ಚಾಸಾ-3 ಮತ್ತು 4 ಇವರು ನನ್ನ ಮುಂದೆ ನಿಪಿ-11 ಮತ್ತು 12 ರಂತೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-13 ಕ್ಕಾಗಿ ಕೋರಿಕೆಯನ್ನು ನನ್ನ ಸಿಬ್ಬಂದಿ ತೆಗೆದುಕೊಂಡು ಹೋಗಿದ್ದರು. ಅವರು ಯಾರು ಎಂದು ಈಗ ನೆನಸಿಲ್ಲ. ನಿಪಿ-13 ನ್ನು ಠಾಣೆಯಲ್ಲಿ ಎಷ್ಟು ಗಂಟೆಗೆ ಪಡೆದಿದ್ದೆ ಎಂದು ಈಗ ನೆನಪಿಲ್ಲ. ನಿಪಿ-13 ರಂತೆ ನಾನು ಅಧೀಕ್ಷಕರಿಂದ ಆ

ಸಮಯದಲ್ಲಿ ಯಾವುದೇ ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-13 ಮತ್ತು 14 ಇವುಗಳನ್ನು ತನಿಖೆಯ ಪ್ರಕ್ರಿಯೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಚಾಸಾ -2 ರಂತಹ ಪತ್ರಾಂಕಿತ ಅಧಿಕಾರಿಗಾಗಿ ಕೋರಿಕೆಯನ್ನು ಸಿಬ್ಬಂದಿ ತೆಗೆದುಕೊಂಡು ಹೋಗಿದ್ದರು. ಅವರು ಎಷ್ಟು ಗಂಟೆಗೆ ಹೋಗಿದ್ದರು ಎಂದರೆ , 3-30 ರಿಂದ 4 ಗಂಟೆಯ ಸಮಯಕ್ಕೆ ಹೋಗಿದ್ದರು. ಚಾಸಾ -2, 3 ಮತ್ತು 4 ಇವರಿಗೆ ದಾಳಿಯ ಬಗ್ಗೆ ತಿಳಿಸಿಕೊಟ್ಟ ನೋಟಿಸಿನಲ್ಲಿ ಸಮಯ ದಾಖಲಿಸಿಲ್ಲ.

2) ಆದಿನ ನಾವು ತೆಗೆದುಕೊಂಡು ಹೋಗಿದ್ದ ಖಾಸಗಿ ವಾಹನ ಯಾರದ್ದು ಎಂದು ಈಗ ನೆನಪಿಲ್ಲ. ಆ ವಾಹನದ ಮಾಲೀಕರನ್ನು ನಾನು ವಿಚಾರಣೆ ಮಾಡಿಲ್ಲ ಎಂದರೆ ನಿಜ. ನಿಪಿ-4 ರ ಸಮಯದಲ್ಲಿ ಬಳಸಿದ ಸರಕಾರಿ ವಾಹನದ ಲಾಗ್ ಬುಕ್ ಠಾಣೆಯಲ್ಲಿದೆ. ಆ ಪುಸ್ತಕದಲ್ಲಿ ಸರಕಾರಿ ವಾಹನವನ್ನು ನಿಪಿ-4 ರ ಜಾಗಕ್ಕೆ ತೆಗೆದುಕೊಂಡು ಹೋಗಿದ್ದ ಬಗ್ಗೆ ದಾಖಲಾತಿ ಇದೆ. ಆದಿನ ನಿಪಿ-4 ರ ಜಾಗಕ್ಕೆ ನಾವು ಸರಕಾರಿ ವಾಹನದಲ್ಲಾಗಲೀ, ಖಾಸಗಿ ವಾಹನದಲ್ಲಾಗಲೀ ಹೋಗಿಲ್ಲ ಎಂದರೆ ಸರಿಯಲ್ಲ. ಆದಿನ ನಾವು ತಕ್ಷೀರು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

3) ನಿಶಾನೆ ಪಿ-3 ಮತ್ತು 15 ರಲ್ಲಿ ಇಬ್ಬರು ವ್ಯಕ್ತಿಗಳ ಹಸ್ತಾಕ್ಷರ ಇದೆ ಎಂದರೆ ಸರಿಯಲ್ಲ. ನಿಪಿ-15 ರ ನೋಟಿಸನ್ನು ಹಿಂದಿ ಅಥವಾ ಇಂಗ್ಲೀಷ್ ನಲ್ಲಿ ತರ್ಜುಮೆ ಮಾಡಿ ಹೇಳಿದೆ ಎಂದು ದೃಢೀಕರಿಸಿಲ್ಲ. ನಿಪಿ-4 ರ ಪಂಚನಾಮೆಯ ಸಮಯದಲ್ಲಿ ಸಿಬ್ಬಂದಿ ನವೀನ್ ಎನ್ನುವವರು ಫೋಟೋ ತೆಗೆದಿದ್ದರು ಎಂದು ನಮೂದಿಸಿಲ್ಲ ಎಂದರೆ ನಿಜ. ನಿಪಿ-18 ರ ದಾಖಲಾತಿಯನ್ನು ನಿಪಿ-7 ರಿಂದ 10 ರ ಫೋಟೋಗಳಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಫೋಟೋಗಳಿಗಾಗಿ ಬಳಸಿದ ಕ್ಯಾಮರಾ, ಮೊಬೈಲ್ ಕ್ಯಾಮರಾ. ಅದು ನವೀನ್ ಇವರಿಗೆ ಸೇರಿದ್ದು. ಅದೇ ರೀತಿ ನಿಪಿ-26 ರ ಫೋಟೋಗಳನ್ನು ಸಹ ಅವರೇ ತೆಗೆದಿದ್ದರು. ನಿಪಿ-7 ರಿಂದ 10 ರ ಫೋಟೋಗಳನ್ನು ನಿಪಿ-4 ರ ಪಂಚನಾಮೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ.

4) ಆದಿನ ಆರೋಪಿಯ ಬಳಿ ಇದ್ದದ್ದು ಶೋಲ್ಡರ್ ಬ್ಯಾಗ್. ನ್ಯಾಯಾಲಯದ ಮುಂದೆ ಇರುವ ಎಂಒ-2 ರ ಬ್ಯಾಗ್ ಬ್ಯಾಕ್ ಬ್ಯಾಗ್ ಎಂದರೆ, ಅದನ್ನು ನಾವು ಶೋಲ್ಡರ್ ಬ್ಯಾಗ್ ಎಂದು ಹೇಳುತ್ತೇವೆ.

5) ನಮ್ಮ ಅಂಗ ಶೋಧನೆಗಾಗಿ ಪ್ರತಿಯೊಬ್ಬರಿಗೆ ಎಷ್ಟು ಹೊತ್ತು ಹಿಡಿದಿತ್ತು ಎಂದರೆ, ಒಂದು ನಿಮಿಷ ಅಥವಾ ಕಡಿಮೆ. ಮಣಿಪಾಲ ದಾಟಿದ ನಂತರ ಸಿಗುವ ಊರು ಈಶ್ವರ ನಗರ ಎಂದರೆ ನಿಜ. ಆ ಊರಿನ ಮಧ್ಯದಲ್ಲಿ ರಾಜ್ಯ ಹೆದ್ದಾರಿ ಪೂರ್ವಾಭಿಮುಖವಾಗಿ ಹೋಗುತ್ತದೆ ಎಂದರೆ, ನಿಜ. ಸದರಿ ಹೆದ್ದಾರಿಗೆ ಹೊಂದಿಕೊಂಡಂತೆ ಈಶ್ವರ ನಗರದಲ್ಲಿ ಉತ್ತರ ಮತ್ತು ದಕ್ಷಿಣದಲ್ಲಿ ಮುಖ್ಯ ರಸ್ತೆಗಳು ಇವೆ ಎಂದರೆ, ನಾನು ಗಮನಿಸಿಲ್ಲ. ಆದಿನ ನಾವು ಅರೋಪಿಯನ್ನು ಕಂಡಿದ್ದ ಜಾಗೆ ರಾಜ್ಯ ಹೆದ್ದಾರಿಯಿಂದ ಹೋಗುವ ಉತ್ತರ ದಿಕ್ಕಿನ ಕಡೆಯೋ, ದಕ್ಷಿಣ ದಿಕ್ಕಿನ ಕಡೆಯೋ ಎಂದು ದಾಖಲಿಸಿಲ್ಲ ಎಂದರೆ, ನಿಜ.

6) ತನಿಖೆಗಾಗಿ ದಾಖಲೆಗಳನ್ನು ನಾವು ಠಾಣೆಯಲ್ಲಿ ಬರೆದಿದ್ದೇವೆ ಎಂದರೆ ಸರಿಯಲ್ಲ. ನಾನು ನಿಪಿ-4 ರಲ್ಲಿ ಹೇಳಿದಲ್ಲಿ ಜಾಗೆಯಲ್ಲಿ ನಾವು ಆರೋಪಿತನನ್ನು ಹಿಡಿದಿಲ್ಲ ಎಂದರೆ ಸರಿಯಲ್ಲ. ಆ ಜಾಗೆಯಲ್ಲಿ ಆರೋಪಿತನಿಂದ ನಾವು ಈಗ ಹೇಳಿದ 2 ಕೆಜಿ ಗಳಿಗಿಂತಲೂ ಅಧಿಕ ಗಾಂಜಾವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಎಂಒ-1 ರ ಮಾದರಿ ಗಾಂಜಾ, ಎಂಒ-2 ರ ಬ್ಯಾಗ್ ಮತ್ತು ಎಂಒ-3 ರ ಮೊಬೈಲ್ ಅನ್ನು ಆರೋಪಿತನಿಂದ ಆದಿನ ನಾವು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-19 ರ ವಿಶೇಷ ವರದಿಯನ್ನು ತನಿಖೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ನಿಪಿ-13 ಕ್ಕಾಗಿ ನಾನು ಯಾವುದೇ ಕೋರಿಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ ಮತ್ತು ಅದನ್ನು ತನಿಖೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಬರೆದ ಒಂದು ತಪ್ಪು ತನಿಖಾ ವರದಿಗೆ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ. ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.